ಚೆನ್ನಾಗಿ ನೋಡಿಕೊಂಡ್ರು. ತಟಾರಂತ ಯಾವ ಸುಳಿವು ಸೂಚನೆನೂ ಕೊಡದೆ ಹೋಗೇಬಿಟ್ರು. ಈಗ ನಮಗೆ ನೀವಲ್ಲದೆ ಯಾರು ದಿಕ್ಕು? ನಿಮ್ಮಪ್ಪ ನೋಡ್ಕಂಡಂಗೇ ನಮ್ಮನ್ನು ನೋಡ್ಕೋಬೇಕು ದೇವರು'. ನಾನು ಹೇಳಿದೆ, 'ನಾನು ಈ ಊರಲ್ಲಿ ವಾಸ ಇರ್ತೀನೋ ಇಲ್ವೋ ಇನ್ನೂ ನಿರ್ಧಾರ ಮಾಡಿಲ್ಲ. ಆದರೂ ನಿಮಗೆಲ್ಲ ಏನೂ ತೊಂದರೆ ಬರದ ಹಾಗೆ ಏರ್ಪಾಟು ಮಾಡ್ತೀನಿ'. 'ಹಾಗಲ್ಲ, ಮಾರಾಜ, ದೊಡ್ಡರೆಡ್ಡಿ ನಮಗೆ ತಿಂಗಳು ತಿಂಗಳೂ ಗುಟ್ಟಾಗಿ ದುಡ್ಡು ಕೊಡ್ತಿದ್ರು' ಎಂದ. ನನಗೆ ಖುಷಿಯಾಯಿತು. ನಮ್ಮಪ್ಪನಿಗೆ ಈ ದಲಿತರ ಬಗ್ಗೆ ಅಂತರ್ಯದಲ್ಲಿದ್ದ ಪ್ರೀತಿ ತಿಳಿದು, ಅವನ ಬಗ್ಗೆ ಅಭಿಮಾನ ಉಕ್ಕಿತು. 'ನಿಮ್ಮೆಲ್ಲರಗೂ ಕೊಡ್ತಿದ್ರ? ತಿಂಗಳಿಗೆ ಎಷ್ಟು ಕೊಡ್ತಿದ್ರು?' ನಾನು ಉದ್ವೇಗದಿಂದ ಕೇಳಿದೆ. 'ಎಲ್ಲರಿಗೂ ಕೊಡ್ತಿರ್ಲಿಲ್ಲ, ದೇವರು, ನಮ್ಮಿಬ್ಬರಿಗೆ ಮಾತ್ರ ಗುಟ್ಟಾಗಿ ತಿಂಗಳಿಗೆ ಐವತ್ತು ರೂಪಾಯಿ ಕೊಡ್ತಿದ್ರು' ಎಂದ. ನಾನು ನಿರಾಸೆ, ಅನುಮಾನದಿಂದ ಕೇಳಿದೆ, 'ನಿಮಗೆ ಮಾತ್ರ ಯಾಕೆ ಕೊಡ್ತಿದ್ರು?' ಅವನು ಮತ್ತೆ ಕೈಕೈ ಹೊಸೆಯುತ್ತಾ ತಡವರಿಸಿದ, 'ಅದು ಯಾರಿಗೂ ಹೇಳುವಂಥದಲ್ಲ. ಹೇಳೋದಿಲ್ಲಾಂತ ದೊಡ್ಡ ರೆಡ್ಡಿಗೆ ಮಾತು ಕೊಟ್ಟಿದ್ದೇವೆ'. ನಾನು ಅಸಹನೆಯಿಂದ ಹೇಳಿದೆ, 'ಸರಿ ಹಾಗಿದ್ರೆ, ಇನ್ನು ಮುಂದೆ ನಿಮಗೆ ಹಣ ಸಿಕ್ಕೋಲ್ಲ'. ಅವರಿಬ್ಬರೂ ಮತ್ತೆ ನನಗೆ ಅಡ್ಡಬಿದ್ದು, ಅಂಗಲಾಚಿದರು. 'ದಯವಿಟ್ಟು ನಮ್ಮ ಕೈಬಿಡಬೇಡಿ. ನೀವಲ್ಲದೆ ನಮಗೆ ಈ ಮುದಿ ವಯಸ್ನಲ್ಲಿ ಯಾರು ದಿಕ್ಕು? ಇದ್ದ ಒಬ್ಬ ಮಗ ಕಾಯಿಲೆ ಬಂದು ತೀರ್ಕೊಂಡ. ಮಗಳು ಮದುವೆಯಾಗಿ ಪಕ್ಕದ ಊರಿಗೆ ಹೋಗಿಬಿಟ್ಟಳು.' 'ಹಾಗಿದ್ರೆ ಆ ಗುಟ್ಟೇನು ಹೇಳಿ' ನಾನು ಒತ್ತಾಯ ಮಾಡಿದೆ. ಆ ಮುದುಕ ಬೆವರೊರೆಸಿಕೊಳ್ಳುತ್ತಾ ತೊದಲಿದ, 'ಕೇಳಿದರೆ ನಿಮಗೆ ಕೋಪ ಬರಬೌದು. ನಮ್ಮನ್ನು ಗುಂಡಿಟ್ಟು ಕೊಲ್ಲಬೌದು, ಯಾರಿಗಾದರೂ ಹೇಳಿದರೆ ಗುಂಡಿಟ್ಟು ಕೊಂದು ಬಿಡ್ತೀನೀಂತ ದೊಡ್ಡರೆಡ್ಡಿ ಹೆದರಿಸಿದ್ರು. ನಾವು ಈವರೆಗೆ ಯಾರಿಗೂ ಹೇಳಿಲ್ಲ, ನಿಮಗೂ ಹೇಳಲ್ಲ. ನೀವು ದುಡ್ಡು ಕೊಡದಿದ್ದರೂ ಪರವಾಗಿಲ್ಲ. ನೀವು ಚೆನ್ನಾಗಿದ್ರೆ ನಮಗಷ್ಟೇ ಸಾಕು. 'ಬಾರೇ ಹೋಗೋಣ' ಎಂದು ಆ ಮುದುಕಿಯನ್ನು ಎಬ್ಬಿಸಿಕೊಂಡು ಹೊರಡಲು ಅನುವಾದ. ಆ ಮುದುಕಿ ಬಿಕ್ಕಿಬಿಕ್ಕಿ ಅಳತೊಡಗಿದಳು. ನಾನು ಅವರನ್ನು ತಡೆದು, ಸಮಾಧಾನ ಮಾಡಿ, ಅವರಿಗೆ ಯಾವ ಅಪಾಯವೂ ಇಲ್ಲವೆಂದು ಮಾತುಕೊಟ್ಟೆ. ಆದರೂ ಅವರು ಬಾಯಿ ಬಿಡಲಿಲ್ಲ. 'ಈ ಗುಟ್ಟು ನೀವೂ ತಿಳ್ಕೋಬಾರದು, ಒಡೆಯ, ನಿಮ್ಮ ಮನಸ್ಸಿಗೆ ತುಂಬಾ ಬೇಜಾರಾಗಬೌದು' ಎಂದು ಮುದುಕ ಗೋಗರೆದ. 'ನನಗೆಷ್ಟು ಬೇಜಾರಾದ್ರೂ ಪರವಾಗಿಲ್ಲ, ತಡಕೊಳ್ತಿನಿ, ಧೈರ್ಯವಾಗಿ ಹೇಳಿ' ಎಂದೆ.

ಮುದುಕ ಅಂಜುತ್ತಂಜುತ್ತ ಪಿಸುಗುಟ್ಟಿದ, 'ದೊಡ್ಡರೆಡ್ಡಿ ನನ್ನ ಹೆಂಡ್ತೀನ ಇಟ್ಟುಕೊಂಡಿದ್ರು'. ಗಂಡ ಅನ್ನಿಸಿಕೊಂಡ ಬಡಪಾಯಿ ಪ್ರಾಣಿ ಇಂಥ ವಿಷಯಾನ ಹೀಗೆ ಅಸಹಾಯಕತೆಯಿಂದ ನಾಚಿಕೆ ಇಲ್ಲದೆ ಹೇಳಿಕೊಳ್ಳಬೇಕಾಗಿ ಬಂದಂಥ ದುಃಸ್ಥಿತಿಯ ಬಗ್ಗೆ ನನಗೆ ಹೇಸಿಗೆ ಅನ್ನಿಸಿತು. ಕನಿಕರ ಮೂಡಿತು. ಆದರೆ ಇದು ಆ ಹೊಲೆಯರಿಗೆ ಸರ್ವೇಸಾಮಾನ್ಯ ವಿಷಯವಾಗಿದ್ದುದರಿಂದ ಅವನು ನಿರ್ಭಾವದಿಂದ ಹೇಳಿದ್ದ. ಏನೋ ಮಹಾ ದೊಡ್ಡ ಗುಟ್ಟನ್ನು ನಿರೀಕ್ಷಿಸಿದ್ದ ನನಗೆ ನಿಜಕ್ಕೂ ನಿರಾಸೆಯಾಯಿತು. 'ಅಷ್ಟೇನಾ?' ಅಂದೆ. 'ಅಷ್ಟೆ ಅಲ್ಲ ದೇವರು ಮುಂದೆ ಕೇಳಿ' ಎಂದು ಹೀಗೆ ಹೇಳಿದ.

ನನ್ನ ತಾಯಿಗೆ ಮೊದಲ ಹೆಣ್ಣು ಮಗು ಆದ ಮೇಲೆ ಸರಿಯಾಗಿ ಗರ್ಭಾನೇ ನಿಲ್ತಿರಲಿಲ್ಲವಂತೆ. ಒಂದೆರಡು ಮಕ್ಕಳು ಹುಟ್ಟಿದ ಸ್ವಲ್ಪ ಹೊತ್ತಿಗೆಲ್ಲ ತೀರಿಕೊಂಡವಂತೆ. ಹೀಗೆ